ಹಣವನ್ನು ಲಪಟಾಯಿಸುತ್ತಾರೆ. ಇದು ವಾಸ್ತವ ಸಂಗತಿ, ಮಾನ್ಯ ಅರಣ್ಯ ಸಚಿವರಿಗೆ ಗೊತ್ತಿದೆ, ನಾನು ಹೊಸದಾಗಿ ತಿಳಿಸುವಂಥದ್ದಲ್ಲ. ಈ ರೀತಿ ಮೋಸ ನಡೆಯಬಾರದು. ನಿಮ್ಮ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗುತ್ತಿದೆ, ಲೂಟಿಯಾಗುತ್ತಿದೆ, ಇದನ್ನು ಯಾವ ರೀತಿಯಲ್ಲಿ ನಿಲ್ಲಿಸುತ್ತೀರಿ? ಒಂದು ವಿಚಾರವನ್ನು ನಾನು ನಿಮ್ಮ ಬಳಿ ಕೇಳುತ್ತಿದ್ದೇನೆ. ಇನ್ನು ಮುಂದೆಯಾದರೂ ಇದನ್ನು ಸಮಗ್ರವಾಗಿ ತನಿಖೆ ಮಾಡುತ್ತೀರಾ? ನಿಮಗೆ ಇಚ್ಛೆ ಇದ್ದರೆ ಸಮಗ್ರವಾಗಿ ತನಿಖೆ ಮಾಡಿ ಯಾರೆಲ್ಲಾ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಅವರೆಲ್ಲರ ಮೇಲೆ ಶಿಸ್ತು ಕ್ರಮವನ್ನು ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳಿ ಎಂದು ಕೇಳುತ್ತಿದ್ದೇನೆ.

ಶ್ರಿ ಸಿ. ಪಿ. ಯೋಗೀಶ್ವರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ವಸಂತ ಬಂಗೇರರವರ ನಿರ್ದಿಷ್ಟವಾದ ಯಾವುದಾದರೂ ಆಪಾದನೆ ಇದ್ದರೆ ಹೇಳಲಿ, ಆ ಬಗ್ಗೆ ನಾನು ತನಿಖೆ ಮಾಡಿ ಅವರಿಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಆಯಿತು

ಪ್ರಶ್ನೆ ಸಂಖ್ಯೆ: 64 (557) (ಮಾನ್ಯ ಸದಸ್ಯರಾದ ಶ್ರೀ ಗೋಪಾಲಕೃಷ್ಣ ಬೇಳೂರುರವರು ಹಾಜರಿರಲಿಲ್ಲ)

ರಂಗಮಂದಿರ ಶಿಥಿಲವಾಗಿರುವ ಬಗ್ಗೆ

65 (12) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):– ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಗ್ರಾಮದಲ್ಲಿರುವ ಬಯಲು ರಂಗಮಂದಿರವು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಶಿಥಿಲವಾಗಿರುವ ರಂಗಮಂದಿರವನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಬಂದಿದೆ.

ಆ) ಕಾಮಗಾರಿಯ ಅಂದಾಜುವೆಚ್ಚ ಪಟ್ಟಿ ಪಡೆದು ಸದರಿ ರಂಗಮಂದಿರವನ್ನು

ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೃಷ್ಣಪ್ಪ ಎಂ.ಟಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರ ರೊಟಿನ್ ಆಗಿ ಬರುತ್ತಿದೆ. ಕಳೆದ ಬಾರಿ ನಾನು ಖುದ್ದಾಗಿ ಹೋಗಿ ಪತ್ರ ಬರೆದು ವಿನಂತಿ ಮಾಡಿದ್ದೇನೆ. ಏಕೆಂದರೆ ನನ್ನ ಕ್ಷೇತ್ರ ಸನ್ಮಾನ್ಯ ಮಾಸ್ಟರ್ ಹಿರಣ್ಣಯ್ಯನವರು ಜನಿಸಿದ ಜನ್ಮಸ್ಥಳ. ಅಲ್ಲಿ ಬಹಳ ಕಲಾವಿದರಿದ್ದಾರೆ . ದಿವಂಗತ ಬೈರಪ್ಪಾಜಿ ಹಾಗೂ ಲೋಕಸಭೆ ಸದಸ್ಯರಾಗಿದ್ದ ದಿವಂಗತ ಲಕ್ಕಪ್ಪರವರ ಅವಧಿಯಲ್ಲಿ ಒಂದು ಉತ್ತಮವಾದ ರಂಗಮಂದಿರ ಸ್ಥಾಪಿಸಿದರು. ಅದು ಈಗ ಶಿಥಿಲಗೊಂಡಿದೆ. ಕಳೆದ ಬಾರಿಯೂ ಸಹ ಮಾನ್ಯ ಸಚಿವರು ಇದೇ ಉತ್ತರ ಕೊಟ್ಟಿದ್ದಾರೆ. ಈ ಉತ್ತರ ನನಗೆ ಮೂರನೇ ಬಾರಿ ಬಂದಿದೆ. ಯಾವಾಗ ಕೈಗೆತ್ತಿಕೊಳ್ಳುತ್ತೀರಿ ? ಯಾವಾಗ ಮುಗಿಸುತ್ತೀರಿ ? ಎಂದು ಹೇಳಿದರೆ ತುಂಬಾ ಸಂತೋಷ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಈ ತಿಂಗಳಲ್ಲೇ ಅಂದಾಜು ಪಟ್ಟಿ ತರಿಸಿ ಶಿಥಿಲಗೊಂಡ ರಂಗಮಂದಿರವನ್ನು ಮಾಡುವುದಕ್ಕೆ ನಿರ್ದೇಶನ ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಚಿರತೆ ಹಾವಳಿ ತಡೆಯುವುದು

66 (684) ಶ್ರೀ ಮಂಜು ಎ. (ಅರಕಲಗೂಡು):– ಅರಣ್ಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಅರಕಲಗೂಡು ಕ್ಷೇತ್ರದಲ್ಲಿ ಚಿರತೆಯ ಹಾವಳಿ ಜಾಸ್ತಿಯಾಗಿ ಇತ್ತೀಚೆಗೆ ಒಂದು ಮಗುವಿನ ತಲೆಬುರುಡೆಯನ್ನು ತಿಂದು ಸಾಯಿಸಿರುವುದು ಸರ್ಕಾರದ ಗಮನದಲ್ಲಿದೆಯೇ ;

ಆ) ಈ ಭಾಗದ ಜನರು ಭಯಭೀತರಾಗಿರುವ ಕಾರಣ ಆ ಚಿರತೆಗಳನ್ನು ಹಿಡಿದು ಬೇರೆ ಯಾವುದಾದರೂ ಕಾಡಿಗೆ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಸಂತೆಮರೂರು ಗ್ರಾಮದಲ್ಲಿ ಒಬ್ಬ ಬಾಲಕನನ್ನು ಚಿರತೆಯೊಂದು ಹೊತ್ತೊಯ್ದು ಸಾಯಿಸಿದ್ದು. ಇದೊಂದು ಆಕಸ್ಮಿಕ ಘಟನೆಯಾಗಿದೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.